**OS-197/2016 P.W.1**

ದಿನಾಂಕ 29.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u>** **:** ಪ್ರತಿವಾದಿಯ ಪರ ವಕೀಲರಿಂದ :-

ಈ ದಾವೆಗೂ ಮುಂಚೆ ಪ್ರತಿವಾದಿಯರು ನನ್ನವಿರುದ್ದ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ 84/2016 ಮತ್ತು 86/2016 ದಾವೆಗಳನ್ನು ಹಾಕಿದ್ದರು ಎಂದರೆ ಸರಿ. ಸದರಿ ದಾವೆಗಳಲ್ಲಿ ನನ್ನ ವಿರುದ್ದವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆ ಡಿಕ್ರಿಯಾದ ನಂತರ ಈ ದಾವೆಯನ್ನು ನಾನು ವೆಕೇಷನ್ ನ್ಯಾಯಾಲಯದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಗಳನ್ನು ಹಾಕಿರುವ ವಿಚಾರವನ್ನು ನಾನು ಈ ದಾವೆಯಲ್ಲಿ ತಿಳಿಸಿರುವುದಿಲ್ಲ ಸಾಕ್ಷಿ ನನಗೆ ನನ್ನ ವಕೀಲರು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರ ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿ. 2 ನೇ ಪ್ರತಿವಾದಿಯ ಸ್ವತ್ತು ದಾವಾ ಆಸ್ತಿಯ ಪಶ್ಚಿಮಕ್ಕೆ ಬರುತ್ತದೆ. 1 ನೇ ಪ್ರತಿವಾದಿಯ ಸ್ವತ್ತುದಾವಾ ಆಸ್ತಿಯ ಉತ್ತರಕ್ಕೆ ಬರುತ್ತದೆ. ನಾನು ಖರೀದಿ ಮಾಡುವ ಪೂರ್ವದಲ್ಲಿ 2 ನೇ ಪ್ರತಿವಾದಿ ತನ್ನ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿ. ದಾವೆ ಹಾಕುವ ಪೂರ್ವದಲ್ಲಿ ನನ್ನ ಕ್ರಯಪತ್ರದಲ್ಲಿ ದಾವಾ ಅಸ್ತಿಯ ಪೂರ್ವಕ್ಕೆ ರಿಯಾಜ್ ಅಹಮದ್ ರವರ ಮನೆ ಎಂದು ಬರೆದಿರುತ್ತದೆ. ಸದರಿ ಕ್ರಯ ಪತ್ರದಲ್ಲಿ ಪೂರ್ವಕ್ಕೆ ಮನೆ ಮತ್ತು ಕಾಂಪೌಂಡ್ ಎಂದು ಬರೆದಿದೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಮುಂಚೆ 2 ನೇ ಪ್ರತಿವಾದಿ ಮನೆಯನ್ನು ಕಟ್ಟಿದ್ದರು ಎಂದರೆ ಸರಿ. ಅವರು ತಮ್ಮ ಮನೆಯ ಹಿಂದೆ ಕಾಂಪೌಂಡ್ ಅನ್ನು ಸಹ ಹಾಕಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಆಸ್ತಿಯ ಅಳತೆ 05.11.1977 ರಲ್ಲಿ 34 x 44 ಇತ್ತು. ಆನಂತರ ಅವರು ಅಳತೆಯನ್ನು ಬದಲಾಯಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯು ಖರೀದಿ ಮಾಡಿದ ಸ್ವತ್ತಿನ ಅಳತೆ 30 x 40 ಅಡಿ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಆಸ್ತಿಯ ಪೂರ್ವದಲ್ಲಿ ರಸ್ತೆಯಿಂದ ಪಶ್ಚಿಮದ ಕನ್ಸರ್ವೆನ್ಸಿ ವರೆಗೆ 147 ಅಡಿ ಉದ್ದ ಇದೆ. 1 ನೇ ಪ್ರತಿವಾದಿಯ ಆಸ್ತಿ ಖಾಲಿ ಜಾಗ ಎಂದರೆ ಸರಿ. 1 ನೇ ಪ್ರತಿವಾದಿಯ ಪುರಸಬೆಯ ಅಸೆಸ್ಮಂಟ್ ಪ್ರಕಾರ 1961-62 ರಲ್ಲಿ 24 x 135 ಅಡಿ ಇತ್ತು. 1 ನೇ ಪ್ರತಿವಾದಿಯ ಸ್ವತ್ತು 32 x 132 ಅಡಿ

ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯರ ಎಲ್ಲಾಸ್ವತ್ತು ಮೂಲತಃ ಮುಸ್ಲಿಂ ಜನಾಂಗದವರದ್ದು ಎಂದರೆ ನನಗೆ ಗೊತ್ತಿಲ್ಲ. ಅವರ ಕುಟುಂಬದಲ್ಲಿ ವಿಭಾಗವಾದ ನಂತರ ನನಗೆ ಮಾರಾಟ ಮಾಡಿದವರಿಗೆ ಸ್ವತ್ತು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೈಯದ್ ರಿಯಾಜ್ ಮತ್ತು ಮಲ್ಲಿಕಾ ಖಾನಂ ರವರಿಗೆ ಸೇರಿದ ಸ್ವತ್ತನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಾನು ಖರೀದಿ ಮಾಡಿದ ಸದರಿ ಆಸ್ತಿಯ ಅಳತೆ 20 x 103 ಅಡಿಗಳು. ನಾನು ಖರೀದಿ ಮಾಡಿರುವ 2 ಆಸ್ತಿಗಳ ಅಳತೆಯನ್ನು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರದಲ್ಲಿ 11 x 3 ವರೆ ಅಡಿ , 11x 45 ವರೆ ಅಡಿ ಮತ್ತು 11x 56 ಅಡಿ ಎಂದು ಇದೆ. ಅದರಲ್ಲಿ ಮತ್ತೊಂದು ಆಸ್ತಿ 20 x 103 ಅಡಿ ಎಂದು ಅಳತೆ ತೋರಿಸಿದೆ. ಸದರಿ 20 ಮತ್ತು 11 ಅಡಿ ಎರಡು ಸೇರಿ ಒಂದೇ ಆಸ್ತಿ ಎಂದರೆ ಸರಿಯಲ್ಲ. ಸದರಿ 20 ಅಡಿ ಮತ್ತು 11 ಅಡಿ ಅಗಲದ ಅಳತೆ. ನಾನು ನನ್ನ ಕಟ್ಟಡವನ್ನು ಕಟ್ಟಲು ಪರವಾನಿಗೆ ಪಡೆದಿದ್ದು ಅದನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ನಾನು ಕಟ್ಟಡವನ್ನು ಕಟ್ಟುತ್ತಿದ್ದೇನೆ. ನಾನು ಕಟ್ಟಡ ಕಟ್ಟುತ್ತಿರುವ ವಿಚಾರವನ್ನು ನನ್ನ ವಕೀಲರ ಬಳಿ ಹೇಳಿರುತ್ತೇನೆ. ನಾನು ನನ್ನ ಕಟ್ಟಡದ ಉತ್ತರದಲ್ಲಿ 2 ವರೆ ಅಡಿ, ದಕ್ಷಿಣಕ್ಕೆ 1 ವರೆ ಅಡಿ ಸೆಟ್ ಬ್ಯಾಕ್ ಬಿಟ್ಟಿರುತ್ತೇನೆ. ಪೂರ್ವಕ್ಕೆ ಎಷ್ಟು ಎಂದು ನನಗೆ ನೆನಪಿಲ್ಲ. ನನಗೆ ಮತ್ತು 2 ನೇ ಪ್ರತಿವಾದಿಗೆ ಕಾಂಪೌಂಡ್ ವಿಚಾರವಾಗಿ ಜಗಳ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಕಾಂಪೌಂಡ್ ಅನ್ನು ಹೊಡೆದ ಕಾರಣ ಅವರು ನನ್ನ ವಿರುದ್ದ ದೂರನ್ನು ಸಲ್ಲಿಸಿದ್ದರು ಎಂದರೆ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಅವರ ಸ್ವತ್ತಿನ ದಕ್ಷಿಣೆಕ್ಕೆ ಕಾಂಪೌಂಡ್ ಅನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಕಾಂಪೌಂಡ್ ಅನ್ನು ಹೊಡೆದ ಕಾರಣ ಅವರುಗಳು ನನ್ನ ವಿರುದ್ದ ದಾವೆಯನ್ನು ಹಾಕಿದ್ದರು ಎಂದರೆ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಗೆ ಸಂಬಂಧಪಟ್ಟಂತೆ ಒಂದು ಕ್ರಿಮಿನಲ್ ಪ್ರಕರಣ ಆಗಿದೆ ಎಂದರೆ ಸಾಕ್ಷಿ ಅದು ಆಗಿದ್ದು ಖುಲಾಸೆ ಸಹ ಆಗಿದೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯ ದೂರಿನ ಮೇಲೆ ನನ್ನ ವಿರುದ್ದ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ನಾನು ಯಾವುದೇ ದೂರನ್ನು ದಾಖಲು ಮಾಡಿಲ್ಲ. ಸಾಕ್ಷಿ ಮುಂದುವರೆದು ನಾನು ಕೊಡಲು ಹೋಗಿದ್ದು ಅವರು ತೆಗೆದುಕೊಳ್ಳಲಿಲ್ಲ ಎಂದು

ನುಡಿಯುತ್ತಾರೆ. 1 ನೇ ಪ್ರತಿವಾದಿಯು ನನಗೆ ಯಾವ ದಿನಾಂಕ ಬಂದು ತೊಂದರೆ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 28.04.2016 ರಂದು ನಿರ್ಬಂಧಕಾಜ್ಞೆ ತಂದಿದ್ದು ನಾನು ಕೆಲಸ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿ ಯಾವ ದಿನಾಂಕದಂದು ಈ ದಾವೆಯನ್ನು ಹಾಕಲು ನನಗೆ ತೊಂದರೆ ಕೊಟ್ಟಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿಯ ಆಸ್ತಿಯಲ್ಲಿ ಬಾವಿ ಇದೆ ಎಂದರೆ ಸರಿ, ಅದು ಎಲ್ಲರಿಗೂ ಸೇರಿದೆ. ಅದನ್ನು ಸೇರಿಸಿ ಅವರು ಕಾಂಪೌಂಡ್ ಹಾಕಿರುತ್ತಾರೆಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಯ 32 x 132 ಅಡಿ ಅಳತೆಯ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಅಲ್ಲಿ ಇರುವುದೇ 24 x 135 ಅಡಿ ಇದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.